SRI S. M. KRISHNA —As I have stated in may statement, strike without giving notice some times occur which cannot be ruled out It is the liberty and privilege of workere and it is also an obligation on the part of the Government to see that some promises, conciliation or arbitration is arrived at. I do concede that some sugar cane gro wers would have been exposed. Anyway, we will have it verified.

Petition from Citizens of Bangalore about rising prices etc presentation

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇವತ್ತು ತಮಗೆ ಒಂದು ಮನವಿಯನ್ನು ಕೊಡುತ್ತಿದ್ದೇನೆ. ದಿನೇ ದಿನೇ ಏರುತ್ತಿರುವುದು ಬೆಲೆಗಳು ಉಲ್ಬಣವಾಗುತ್ತಿರುವ ನಿರುದ್ಯೋಗದ ಸಮಸ್ಯೆ, ಕ್ಲಿಷ್ಟ ಆಹಾರ ಪರಿಸ್ಥಿತಿ. ಬರಗಾಲದ ಬವಣೆ, ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆ ಹಾಗೂ ಕಾಳೀ ನದಿ ಯೋಜನೆ, ಇತ್ಯಾದಿ ವಿಷಯಗಳ ಬಗ್ಗೆ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ೫ ಲಕ್ಷ ನಾಗರೀಕರು ಸೈನ್ ಮಾಡಿರುವ ಮನವಿಯನ್ನು ತಮಗೆ ಸಲ್ಲಿಸುತ್ತಿದ್ದೇನೆ.

MADAM SPEAKER.—The Petition is presented.

Matters under rule 312

(i) *Re: inadequate supply of water in Bangalore City*

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೋಸನಗರ.—ರೂಲ್ ೩೧೨ರ ಪ್ರಕಾರ ನಾನು ತಮಗೆ ನೋಟೀಸ್ ಕೊಟ್ಟಿದ್ದೇನೆ. ಕಾವೇರಿ ನೀರಿನ ಸರಬರಾಜಿಗೆ ಸಂಬಂಧಪಟ್ಟ ಬೆಂಗಳೂರಿನ ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷರು ಬಹಳ ಹಿಂದೆಯೇ ಬೆಂಗಳೂರಿಗೆ ಕಾವೇರಿ ನೀರನ್ನು ಸರಬರಾಜು ಮಾಡುವುದಕ್ಕೆ ಕಷ್ಟವಾಗುತ್ತದೆಂದು ಹೇಳಿ, ಆದಕಾರಣ ಕಾವೇರಿ ನೀರನ್ನು ಬಿಡಲಿಕ್ಕೆ ಪರವಾನೆ ಕೊಡಬೇಕೆಂದು ಸರ್ಕಾರಕ್ಕೆ ಕಳುಹಿಸಿದ್ದರೂ ಸರ್ಕಾರದವರು ಅದಕ್ಕೆ ಪರವಾನೆ ಕೊಡುವುದರಲ್ಲಿ ಕಾಲವಿಳಂಬವಾಗಿದೆ ಯೆಂಬುದು ಜನಜನಿತವಾದ ಮಾತಾಗಿದೆ ಇದು ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತೆಂದು ಹೇಳುವ ಹಾಗೆ ಆಗಿದೆ. ಈ ಇತಿ ಒಂದು ಗಾದೆ ಇದೆ. ಆದ್ದರಿಂದ ವಾಟರ್ ಸಪ್ಲೈ ಬೋರ್ಡಿನ ಚೇರ್ ಮನ್ ಅವರು ಕಳುಹಿಸಿದಂಥ ಪತ್ರದಲ್ಲಿ ಇದರ ಬಗ್ಗೆ ಪರವಾನೆ ಕೊಡಲು ಕೇಳಿದ್ದಾರೆ. ಸರ್ಕಾರದವರು ಏಕೆ ಇನ್ನೂ ಒಪ್ಪಿಗೆಯನ್ನು ಕೊಡಲಿಲ್ಲ ? ಇದರ ಬಗ್ಗೆ ಡಿಲೇ ಆಗುವುದಕ್ಕೆ ಕಾರಣಗಳೇನು?

ಶ್ರಿ ಸುಭಾಷ್ ಅಸ್ಕೂರೆ ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನಾ ಶಾಖೆಗಳ ರಾಜ್ಯ ಮಂತ್ರಿಗಳು ಸರ್ಕಾರದಲ್ಲಿ ಆದರ ಬಗ್ಗೆ ಡಿಲೇ ಆಗಿಲ್ಲ. ಕಾವೇರಿಯಲ್ಲಿ ನೀರು ಎಷ್ಟು ಇದೆ, ಆ ನೀರಿನ ಮೂಲಕ ಎಷ್ಟು ಎಚ್ಚು ಕಟ್ಟಿಗೆ ಅನುಕೂಲವಾಗುತ್ತದೆಂಬುದನ್ನು ನೋಡಬೇಕಾಗಿದೆ. ಇದು ಕನ್‌ಸಲ್ಟೇಟಿವ್ ಕಮಿಟಿಯ ವರದಿಯನ್ನು ಅವಲಂಬಿಸಿದೆ. ಆದಷ್ಟು ಜಾಗ್ರತೆಯಾಗಿ ಈ ನೀರನ್ನು ಬಿಡ ಬೇಕೆಂದು ಸರ್ಕಾರದ ಇಚ್ಛೆ. ಈಗಾಗಲೇ ಚೀಫ್ ಇಂಜಿನಿಯರನ್ನು ಮೈಸೂರಿಗೆ ಕಳುಹಿಸಿದ್ದೇವೆ. ಅವರು ಸ್ಥಳ ಪರಿಶೀಲಿಸಿದ ನಂತರ ವರದಿಯನ್ನು ನಮಗೆ ಕಳುಹಿಸಂತ್ತಾರೆ. We are awaiting the report. The moment the report is received, we will take suitable action.

ಶ್ರೀ ಎಂ ಎಸ್, ಕೃಷ್ಣನ್.—ಅವರು ಪ್ರಶ್ನೆ ಕೇಳಿದ್ದಕ್ಕೂ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಕ್ಕೂ ಒಂದಕ್ಕೊಂದು ಸಂಬಂಧವೇ ಇಲ್ಲ. ಏಕೆಂದರೆ, ಕಾವೇರಿ ವಾಟರ್ ಬೋರ್ಡ್ ಏನಿದೆಯೋ ಅದರ ಅಧ್ಯಕ್ಷರಿಗೂ ಮತ್ತು ಅದರ ಇಂಜಿನಿಯರ್-ಇನ್-ಚೀಫ್ ಅವರಿಗೂ ಏನೋ ವೈಯಕ್ತಿಕ ಭಿನ್ನಾಭಿಪ್ರಾಯವಿದೆ. ಆ ಒಂದು ಭಿನ್ನಾಭಿಪ್ರಾಯವನ್ನು ಇವರು ಟರ್ನ್‌ಓವರ್ ಮಾಡುತ್ತಿದ್ದಾರೆ, ಇವರ ಪ್ರೊಪೋಜಲ್ಸನ್ನು ಅವರು ಮಾನ್ಯ ಮಾಡುತ್ತಾ ಇಲ್ಲವೆಂದು ಎಲ್ಲಾ ಕಡೆಯೂ ಕೇಳಿಬರುತ್ತಿದೆ. ಆದ್ದರಿಂದ ಅದರ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು.